# ಮಾತೆಯೊಬ್ಬರ ಮಾತು

ನಿತ್ಯಾ ಗುರುಮೂರ್ತಿ




ಈಗಿರುವ ಶಾಲೆಗಳ ನಿಯಮದಂತೆ ಪ್ರಿ-ಕೆಜಿಯಿಂದಲೂ ಕಲಿಕಾ ನಿರ್ಧರಣೆಯು ಶಾಲಾ ಚಟುವಟಿಕೆಯ ಒಂದು ಮುಖ್ಯ ಅಂಶವಾಗಿದೆ. ನಾನು 3ವರ್ಷದ ಅವಳಿ ಮಕ್ಕಳ ತಾಯಿ. ನನ್ನ ಮಕ್ಕಳನ್ನು ಶಾಲೆಗೆ ಸೇರಿಸಿದ ಮೊದಲ ತಿಂಗಳಿನಿಂದ ಪ್ರತಿತಿಂಗಳೂ ಕಲಿಕಾ ನಿರ್ಧರಣೆಗೆ ಒಳಪಡಬೇಕಾಗಿದೆ. ನನಗೆ ಇಚ್ಛೆ ಇಲ್ಲದಿದ್ದರೂ ಕೂಡ ನಾನು ನನ್ನ ಮಕ್ಕಳಿಗೆ ತಮ್ಮ ಬುದ್ಧಿ ಸಾಮರ್ಥ್ಯವನ್ನು ತೋರಿಸಲು ಒತ್ತಡ ಹಾಕುವಂತೆ ಬಲವಂತಮಾಡಲಾಯಿತು. ಉಪಾಧ್ಯಾಯರು ಮಕ್ಕಳನ್ನು ಪರಸ್ಪರ ಹೋಲಿಕೆ ಮಾಡಿ ಮಕ್ಕಳ ಪ್ರಗತಿ ಹೆಚ್ಚಿಸಲು ನಿರಂತರ ಸಲಹೆಯನ್ನು ನೀಡುವುದರಿಂದ ತಂದೆತಾಯಿಗಳಿಗೆ ಮಕ್ಕಳ ಮೇಲೆ ಒತ್ತಡ ಹಾಕಲು ಇಷ್ಟವಿಲ್ಲದಿದ್ದರೂ ಅವರು ಆ ರೀತಿ ಮಾಡಬೇಕಾಗಿ ಬರುತ್ತದೆ. ಮಗುವಿಗೆ ಕಥೆ ಹೇಳುವ ಸಾಮರ್ಥ್ಯ, ಚಿತ್ರಕಲೆ ಮುಂತಾದ ಸಾಮರ್ಥ್ಯವನ್ನು ಕಲಿಸಲು ನನ್ನ ಕೆಲವು ಸ್ನೇಹಿತರು ಮಕ್ಕಳನ್ನು ಶಾಲೆಯ ಅವಧಿಯ ನಂತರ ಮನೆಪಾಠಕ್ಕೆ ಕಳುಹಿಸುತ್ತಿದ್ದಾರೆ ಅಷ್ಟು ಚಿಕ್ಕವಯಸ್ಸಿನಲ್ಲಿ ಇದರ ಅಗತ್ಯ ಇಲ್ಲ ಎಂಬುದು ನನ್ನ ಅಭಿಪ್ರಾಯ. ಹೀಗೆ ಮಾಡುವುದರಿಂದ ನಾವು ನಿಜವಾಗಿಯೂ ಅವರ ಕೂತೂಹಲ ದೃಷ್ಟಿಯನ್ನು ಮತ್ತು ಮುಗ್ಧತೆಯನ್ನು ಈ ಅನಗತ್ಯ ಒತ್ತಡ ಹಾಗೂ ಹೆಚ್ಚುವರಿ ಹೊರೆಯಿಂದಾಗಿ ಹಾಳುಗೆಡಹುತ್ತಿದ್ದೇವೆ.

ತನ್ನ ಮಾತೃ ಭಾಷೆಯನ್ನೇ ಸರಿಯಾಗಿ ಮಾತನಾಡಲು ಬಾರದ ವಯಸ್ಸಿನಲ್ಲಿ ಮಕ್ಕಳು ಶಾಲೆಯಲ್ಲಿ ಇಂಗ್ಲಿಷ್ ಮಾತನಾಡಬೇಕೆಂದು ನಿರೀಕ್ಷಿಸಲಾಗುತ್ತದೆ. ಶಾಲೆಯಲ್ಲಿ ಹೆಚ್ಚು ಚುರುಕಾಗಿರುವ ಹಾಗೂ ಹೆಚ್ಚು ತುಂಟಾಟ ಮಾಡುವ ಮಕ್ಕಳನ್ನು ಕಡೆಗಣಿಸಲಾಗುತ್ತದೆ. ಇಂಥಾ ಮಕ್ಕಳ ಮೇಲೆ ಹಿಡಿತ ಸಾಧಿಸುವುದು ಶಿಕ್ಷಕರಿಗೆ ಸಾಧ್ಯವಾಗದೇ ಇರುವುದು ಇದಕ್ಕೆ ಕಾರಣವಾಗಿರುತ್ತದೆ. ಇಂತಹ ಮಕ್ಕಳನ್ನು ಸಮಸ್ಯೆ ಉಂಟುಮಾಡುವವರು ಹಾಗೂ ಜಾಣರಲ್ಲ ಎಂದು ನಿರ್ಧರಿಸಿಬಿಡುತ್ತಾರೆ.

ನನ್ನ ಮಗಳು ಚಿತ್ರಬಿಡಿಸಲು ಮತ್ತು ಚಿತ್ರದಲ್ಲಿ ಬಣ್ಣ ತುಂಬಲು ಆಸಕ್ತಿ ವಹಿಸಿದರೆ, ನನ್ನ ಮಗನ ಆಸಕ್ತಿ ಕೊಂಚ ವಿಭಿನ್ನ, ಆತ ಹೊರಾಂಗಣ ಕ್ರೀಡೆಗಳಲ್ಲಿ ಆಸಕ್ತಿ ಹೊಂದಿದ್ದಾನೆ. ಅದೇನೆ ಇದ್ದರೂ ಕೂಡ ಶಾಲೆಯಲ್ಲಿ ಈ ವಿಷಯಗಳಲ್ಲಿ ಹಾಗೂ ಇದನ್ನು ಹೊರತು ಪಡಿಸಿ ಇತರ ಅಂಶಗಳಲ್ಲೂ ಕೂಡ ಒಂದು ಮಟ್ಟದ ಸಾಧನೆಯನ್ನು ನಿರೀಕ್ಷೆ ಮಾಡುತ್ತಾರೆ (ನನಗನಿಸುವ ಪ್ರಕಾರ ಸ್ವಲ್ಪ ಅಳತೆ ಮೀರಿದ ಸಾಧನೆ). ಶಿಕ್ಷಕರ ಗುರಿ ಯಾವತ್ತೂ ಆಸಕ್ತಿಯ ಕೊರತೆಯಿಂದಲೋ ಅಥವಾ ಇನ್ನಿತರ ಕಾರಣಗಳಿಂದಲೋ ಮಗು ಹೆಚ್ಚಿನ ಸಾಧನೆ ತೋರ್ಪಡಿಸದ ವಿಷಯಗಳನ್ನು ಕುರಿತೇ ಇರುತ್ತದೆ. ನಮ್ಮ ಮಗುವು ಯಾವ ವಿಷಯವನ್ನು ಹೆಚ್ಚು ಆಸಕ್ತಿಯಿಂದ ಕಲಿಯುತ್ತಿದೆಯೋ ಆ ವಿಷಯದ ಕಡೆಗೆ ಗಮನ ಕೊಡುವುದನ್ನು ಬಿಟ್ಟು ಮಗುವಿಗೆ ಇಷ್ಟವಿಲ್ಲದ ವಿಷಯದ ಕಡೆ ಹೆಚ್ಚು ಒತ್ತು ನೀಡುವುದರಿಂದ ಮಕ್ಕಳಿಗೆ ಬರುಬರುತ್ತಾ ಶಾಲೆಗೆ ಹೋಗುವುದೇ ಬೇಡ ಎನಿಸಿಬಿಡುತ್ತದೆ.

ನನ್ನ ಪ್ರಕಾರ ಇದರಿಂದ ಮಕ್ಕಳಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಾಣಬಹುದು. ಜತೆಗೆ ಈ ಬಗ್ಗೆ ಶಾಲಾ ಶಿಕ್ಷಕರು ಕೂಡ ಮಕ್ಕಳ ಬೆಳವಣಿಗೆ ಬಗ್ಗೆ ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಪಾಠ ಪ್ರವಚನ ಮತ್ತು ಮರು ಮೌಲ್ಯೀಕರಣಕ್ಕೆ ಮುಂಚೆ ಹಲವು ಯೋಜನೆಗಳು ಅತ್ಯಗತ್ಯವಾಗಿರುತ್ತದೆ.




Our Education System

"Everybody is a genius. But if you judge a fish by its ability to climb a tree, it will live its whole life believing that it is stupid."

- Albert Einstein

ನಾನು ಶಾಲೆಗೆ ಹೋಗುತ್ತಿದ್ದ ದಿನಗಳಿಗೂ ಹಾಗೂ ಈಗಿನ ದಿನಗಳಿಗೂ ಖಂಡಿತಾ ಸಾಕಷ್ಟು ಬದಲಾವಣೆ ಇದೆ. ಈಗಿನ ಶಿಕ್ಷಕಕರು ಹೆಚ್ಚು ಸಂವೇದನಾಶೀಲರು, ಮಗುವಿನ ಬೆಳವಣಿಗೆಗೆ ಅಗತ್ಯವಾದ ಅಂಶಗಳ ಬಗ್ಗೆ ಅವರಿಗೆ ಅರಿವಿದೆ. ಆದರೂ ಶಾಲೆಯಲ್ಲಿಯ ಮೌಲ್ಯಮಾಪನ ಹಾಗೂ ಬೋಧನೆಯ ಅಂಶಗಳು ಇತ್ತೀಚಿನ ಶಾಲಾ ಕಲಿಕೆ ಮತ್ತು ಕೆಲವು ಶೈಕ್ಷಣಿಕ ಸಿದ್ಧಾಂತಗಳಂತೆ ಅಭಿವೃದ್ಧಿಪರವಾಗಲು ಇನ್ನೂ ಹೆಚ್ಚಿನ ಪ್ರಯತ್ನಗಳು ಬೇಕಾಗುತ್ತವೆ.

***ನಿತ್ಯಾಗುರುಮೂರ್ತಿ,*** *ಗೃಹಿಣಿಯಾಗಿದ್ದು 3ವರ್ಷದ ಅವಳಿ ಮಕ್ಕಳಾದ ಗುರುಪ್ರಿಯಾ ಮತ್ತು ಕುಮಾರಗುರು ಅವರ ತಾಯಿ. ಇವರ ಇಬ್ಬರೂ ಮಕ್ಕಳು ಚೆನ್ನೈನ ಪ್ರತಿಷ್ಠಿತ ಶಾಲೆಯಲ್ಲಿ ಪ್ರಿ-ಕೆಜಿ ಓದುತ್ತಿದ್ದಾರೆ.*



# ಕಲಿಕಾ ನಿರ್ಧರಣೆ : ಕ್ಷೇತ್ರಾನುಭವದ ಟಿಪ್ಪಣಿಗಳು

ರುದ್ರೇಶ್ ಎಸ್



ಶಿಕ್ಷಣ ಕ್ಷೇತ್ರದ ಪ್ರತಿಯೊಂದು ಪ್ರಯತ್ನವೂ ವಿದ್ಯಾರ್ಥಿಗಳ ಕಲಿಕೆಯಲ್ಲಿ ಸುಧಾರಣೆಯನ್ನು ತರುವ ನಿರೀಕ್ಷೆಯನ್ನು ಹೊಂದಿರುತ್ತದೆ. ಭಾರತದ ಹಲವಾರು ಇಂಥ ಕಾರ್ಯಕ್ರಮಗಳು ಶಿಕ್ಷಕರ ಸಾಮರ್ಥ್ಯದ ಅಭಿವೃದ್ಧಿ, ಕಲಿಕೆಗೆ ಸಹಕಾರಿ ವಾತಾವರಣ ಕಲ್ಪಿಸುವ ಅಥವಾ ಶಾಲೆ ಮತ್ತು ಸಮುದಾಯದ ನಡುವೆ ಉತ್ತಮ ಸಂಬಂಧ ಉಂಟುಮಾಡಿ ತನ್ಮೂಲಕ ವಿದ್ಯಾರ್ಥಿಗಳ ಕಲಿಕೆಯಲ್ಲಿ ಉತ್ತಮ ಪರಿಣಾಮವನ್ನು ಉಂಟುಮಾಡುವ ಅಭಿಲಾಷೆಯನ್ನು ಹೊಂದಿರುತ್ತವೆ. ಈ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಸುಧಾರಣೆಯನ್ನು ಅರಿತುಕೊಳ್ಳಲು ಕಲಿಕಾ ನಿರ್ಧರಣೆಯು ಒಂದು ಮುಖ್ಯವಾದ ಭಾಗ ಮತ್ತು ಇದು ಶಿಕ್ಷಕರು ಅಥವಾ ಸುಗಮಕಾರರು, ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಅರಿತುಕೊಂಡು ಅದರ ಪರಿಹಾರಕ್ಕೆ ಹಾಗೂ ಕಲಿಕೆಯ ಫಲಿತಾಂಶವನ್ನು ಹೆಚ್ಚಿಸುವ ಪ್ರಕ್ರಿಯೆಯ ಬಗ್ಗೆ ಯೋಚಿಸಲು ಸಹಾಯಕವಾಗುತ್ತದೆ. ಇದು ಶಿಕ್ಷಕರು ಮತ್ತು ಇತರ ಕಾರ್ಯಕರ್ತರು ಇನ್ನೂ ಪರಿಣಾಮಕಾರಿಯಾಗಿ ಬೋಧನೆಯನ್ನು ಹೇಗೆ ಮಾಡಬೇಕು ಎಂಬುದನ್ನು ಅರಿತುಕೊಂಡು ಅದಕ್ಕೆ ತಕ್ಕಂತೆ ತಯಾರಿ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಅಜೀಂ ಪ್ರೇಂಜಿ ಪ್ರತಿಷ್ಠಾನವು ಕಲಿಕೆಯ ಪರಿಣಾಮವನ್ನು ಹೆಚ್ಚಿಸಲು ಮತ್ತು ಕಲಿಕೆಯನ್ನು ಪ್ರೋತ್ಸಾಹಿಸಲು ಶಾಲೆಗಳಲ್ಲಿ ವಿವಿಧ ಕಲಿಕಾ ನಿರ್ಧರಣೆ ಸಾಧನಗಳನ್ನು ಹಾಗೂ ಪ್ರಕ್ರಿಯೆಗಳನ್ನು ರೂಪಿಸಿದ ಮತ್ತು ಅದನ್ನು ಬಳಸಿದ ಅನುಭವವನ್ನು ಹೊಂದಿದೆ.

**ಕಲಿಕಾ ಖಾತರಿ ಕಾರ್ಯಕ್ರಮ** :

ಕಲಿಕಾ ಖಾತರಿ ಕಾರ್ಯಕ್ರಮವು (ಎಲ್‌ಜಿಪಿ) ಕರ್ನಾಟಕ ಸರ್ಕಾರ ಮತ್ತು ಅಜೀಂ ಪ್ರೇಂಜಿ ಪ್ರತಿಷ್ಠಾನಗಳ ಜಂಟಿ ಸಹಯೋಗದೊಂದಿಗೆ ಜಾರಿಗೆ ತಂದ ಕಾರ್ಯಕ್ರಮ. ಇದನ್ನು 2002 ರಿಂದ 2005ರ ನಡುವೆ ಉತ್ತರ ಕರ್ನಾಟಕದ 7 ಜಿಲ್ಲೆಗಳಲ್ಲಿ ನಡೆಸಲಾಯಿತು. ಈ ಜಿಲ್ಲೆಗಳಲ್ಲಿ ಒಟ್ಟಾರೆ 9270 ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿವೆ. ಇವುಗಳಲ್ಲಿ 1887 ಶಾಲೆಗಳು ಈ ಮೂರು ವರ್ಷದ ಪ್ರಾಯೋಗಿಕ ಪ್ರಾಜೆಕ್ಟ್‌ನಲ್ಲಿ ಸ್ವಯಿಚ್ಛೆಯಿಂದ ಭಾಗವಹಿಸಿದ್ದವು.

ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆ ತರುವುದು ಇದರ ಮುಖ್ಯ ಆಶಯ. ಅಂದರೆ ಸಾಂಪ್ರದಾಯಿಕ ಮೌಲ್ಯಾಂಕನದಿಂದ ಸಾಮರ್ಥ್ಯ/ಕೌಶಲ್ಯ ಮತ್ತು ತಿಳುವಳಿಕೆ ಆಧಾರಿತ ಕಲಿಕಾನಿರ್ಧರಣೆಯನ್ನು ಪ್ರೋತ್ಸಾಹಿಸುವುದಾಗಿತ್ತು. ಪ್ರಾಥಮಿಕ ಶಾಲೆ ತರಗತಿಗಳಿಗೆ ಮಕ್ಕಳ ಸೇರ್ಪಡೆ, ಹಾಜರಿ ಮತ್ತು ಕಲಿಕಾ ಸಾಧನೆಗಳು ಈ ಕಲಿಕಾ ನಿರ್ಧರಣೆಯ ಮಾನದಂಡಗಳು. ಈ ಮೂರು ಮಾನದಂಡಗಳನ್ನು ಪೂರೈಸಿದ ಶಾಲೆಗಳನ್ನು ಕಲಿಕಾ ಖಾತರಿ ಶಾಲೆಗಳು (ವಿಜಯಶಾಲಿಗಳು) ಎಂದು ಘೋಷಿಸಲಾಗುತ್ತಿತ್ತು. 2003ರಲ್ಲಿ 896 ಶಾಲೆಗಳಲ್ಲಿ, 40 ಶಾಲೆಗಳನ್ನು 'ವಿಜಯಶಾಲಿ'ಗಳು (ಕಲಿಕಾ ಖಾತರಿ ಶಾಲೆಗಳು) ಎಂದು ಘೋಷಿಸಲಾಯಿತು ; ಅದೇ ರೀತಿ ಎರಡನೆಯ ವರ್ಷವಾದ 2004ರಲ್ಲಿ 1443ರಲ್ಲಿ 84 ಶಾಲೆಗಳನ್ನು ವಿಜೇತರು ಎಂದು ನಿರ್ಧರಿಸಲಾಯಿತು, ಪ್ರಾಯೋಗಿಕ ಪ್ರಾಜೆಕ್ಟ್‌ನ ಕೊನೆಯ ವರ್ಷ ಅಂದರೆ 2005ರಲ್ಲಿ ನಿರ್ಧರಣೆ ಮಾಡಿದ 1887 ಶಾಲೆಗಳಲ್ಲಿ 144 ಶಾಲೆಗಳನ್ನು ವಿಜಯಶಾಲಿಗಳು ಎಂದು ಘೋಷಿಸಲಾಯಿತು.

ಈ ಕಾರ್ಯಕ್ರಮದ ಮುಖ್ಯ ಅಂಶಗಳೆಂದರೆ: ಶಾಲೆಗಳ ಸ್ವಯಂಪ್ರೇರಿತ ಭಾಗವಹಿಸುವಿಕೆ ಮತ್ತು ಮಕ್ಕಳನ್ನು ತಿಳುವಳಿಕೆ, ಕೌಶಲ್ಯ ಮತ್ತು ಕೌಶಲ್ಯದ ಬಳಕೆಯನ್ನು ಆಧಾರವಾಗಿರಿಸಿಕೊಂಡಿರುವ ಸಾಧನಗಳನ್ನೊಳಗೊಂಡ ನಿರ್ಧರಣೆಗೆ ಒಳಪಡಿಸುವುದು. ಪ್ರತಿಯೊಂದು ಮಗುವಿಗೂ ನಿರೀಕ್ಷಿತ ಸಾಮರ್ಥ್ಯವನ್ನು ಕುರಿತು ಹಿಮ್ಮಾಹಿತಿಗಳನ್ನು ನೀಡಲಾಯಿತು. ಅದಲ್ಲದೆ ಇಲ್ಲಿ ಕಲಿಕಾನಿರ್ಧರಣೆಯನ್ನು ಒಂದು ಸಮೂಹದ ಮಟ್ಟದಲ್ಲಿ ಒಂದು ಆಂದೋಲನದ ರೀತಿಯಲ್ಲಿ ನಡೆಸಲಾಯಿತು. ಇಡೀ ಉತ್ತರ ಕರ್ನಾಟಕದಾದ್ಯಂತ ತರಬೇತಿ ಪಡೆದ ಸುಮಾರು 1000 ಕಾರ್ಯಕರ್ತರು ಏಕಕಾಲಕ್ಕೆ ಕರ್ನಾಟಕದಾದ್ಯಂತ ಕಲಿಕಾನಿರ್ಧರಣೆಯನ್ನು ಮಾಡಿದರು.

1ನೇ ತರಗತಿಯಿಂದ 4ನೇ ತರಗತಿಯವರೆಗಿನ ಮಕ್ಕಳಿಗೆ ಅಜೀಂ ಪ್ರೇಂಜಿ ಪ್ರತಿಷ್ಠಾನದ ನಾಲ್ಕು ಜನರ ತಂಡವು ಭಾಷೆ ಮತ್ತು ಗಣಿತದ ಮೇಲೆ ಮೌಖಿಕ ಮತ್ತು ಬರವಣಿಗೆಯ ಪರೀಕ್ಷೆಯ ಮೂಲಕ ಕಲಿಕಾನಿರ್ಧರಣೆಯನ್ನು ನಡೆಸಿತು.

ಶಿಕ್ಷಕರು ಮಕ್ಕಳಲ್ಲಿನ ಕಲಿಕೆಯ ಸಾಮರ್ಥ್ಯ ಮತ್ತು ತಿಳುವಳಿಕೆ ಮತ್ತು ಅದನ್ನು ಉಪಯೋಗಿಸುವ ಕೌಶಲ್ಯದ ಮೇಲೆ ಹೆಚ್ಚಿನ ಒತ್ತು ನೀಡಬೇಕು ಎಂಬ ಭಾವನೆಯೊಂದಿಗೆ ಹಿಮ್ಮಾಹಿತಿ ನೀಡಲಾಯಿತು ಹಾಗೂ ಈ ಅಭಿಪ್ರಾಯದ ಮೇಲೆ ಶಿಕ್ಷಕರು ವಿದ್ಯಾರ್ಥಿಗಳ ಕೌಶಲ್ಯ ಅಭಿವೃದ್ಧಿಗೆ ತೊಡಗುತ್ತಾರೆ ಎಂದುಕೊಳ್ಳಲಾಯಿತು.

ಆದರೆ ಕುತೂಹಲಕರ ಅಂಶವೆಂದರೆ, ಇಲ್ಲಿ ನಾವಂದುಕೊಂಡಂತೆ ಏನೂ ನಡೆಯಲಿಲ್ಲ. ಇದನ್ನು ಕುರಿತು ಶಿಕ್ಷಕರನ್ನು ವಿಚಾರಿಸಿದಾಗ ತಿಳಿದು ಬಂದ ಅಂಶವೆಂದರೆ, ನಾವು ನೀಡಿದ ವಿವರವಾದ ಹಿಮ್ಮಾಹಿತಿ ಉತ್ತಮವಾಗಿತ್ತು ಆದರೆ ಅದನ್ನು ಕೌಶಲ್ಯ ಮತ್ತು ತಿಳುವಳಿಕೆಯ ಆಧಾರಿತ ಕಲಿಕೆಯಲ್ಲಿ ಹೇಗೆ ಬಳಸುವುದು ಎಂದು ತಿಳಿಯಲಿಲ್ಲ ಎಂಬುದಾಗಿತ್ತು. ಅಲ್ಲದೆ ಎಲ್ಲ ಶಿಕ್ಷಕರ ಒಮ್ಮತದ ಅಭಿಪ್ರಾಯವೆಂದರೆ ಇದನ್ನು ಕಾರ್ಯರೂಪಕ್ಕೆ ತರಲು ಸೂಕ್ತವಾದ ತರಬೇತಿ ಅಗತ್ಯ ಎಂಬುದಾಗಿತ್ತು. ಯಾವುದೇ ತರಬೇತಿಯಿಲ್ಲದೆ ಶಿಕ್ಷಕರು ಈ ಕಾರ್ಯಕ್ರಮದ ಮಾದರಿಯನ್ನು ರೂಪಿಸುತ್ತಾರೆಂದು ನಾವು ನಿರೀಕ್ಷಿಸಿದ್ದೆವು.

**ಈ ಕಾರ್ಯಕ್ರಮದಿಂದ ಕಂಡುಕೊಂಡ ಒಳನೋಟಗಳು:**

- ಕರ್ನಾಟಕದ ಇತಿಹಾಸದಲ್ಲೇ ಮೊಟ್ಟಮೊದಲಿಗೆ ಸುಮಾರು 1800 ಶಾಲೆಗಳಲ್ಲಿ 1ನೇ ತರಗತಿಯಿಂದ 4ನೇ ತರಗತಿಯಲ್ಲಿ ಕಲಿಯುತ್ತಿರುವ ಪ್ರತಿಯೊಬ್ಬ ಮಕ್ಕಳ ಕಲಿಕೆಯ ಫಲಿತಾಂಶದ ವಿವರವಿರುವ ದತ್ತಾಂಶವು ಲಭ್ಯವಾಗುವಂತಾಯಿತು.

- ಸುಮಾರು 1000ಕ್ಕಿಂತ ಹೆಚ್ಚಿನ ಸ್ವಯಂಸೇವಕರ ಸಹಾಯದಿಂದ ನಾವು 7 ಜಿಲ್ಲೆಗಳಲ್ಲಿಯ ಎಲ್ಲ 1800 ಶಾಲೆಗಳನ್ನು 3 ತಿಂಗಳಲ್ಲಿ ಕಲಿಕಾನಿರ್ಧರಣೆಗೆ ಒಳಪಡಿಸುವುದು ಸಾಧ್ಯವಾಯಿತು.

- ಪಾಠ ಅರ್ಥಮಾಡಿಕೊಳ್ಳುವುದನ್ನು ಆಧರಿಸಿದ ಶಾಲಾ ಪ್ರಕ್ರಿಯೆಯನ್ನು ವಿನ್ಯಾಸಗೊಳಿಸಲು ಶಿಕ್ಷಕರಿಗೆ ಸಹಾಯದ ಅಗತ್ಯವಿತ್ತು. ಆದರೆ ಇದು ನಮ್ಮ ಯೋಜನೆಯ ಭಾಗವಾಗಿರಲಿಲ್ಲ.

- ಎಲ್ಲಿಯವರೆಗೆ ಪಾಠ ಅರ್ಥಮಾಡಿಕೊಳ್ಳುವುದನ್ನು ಆಧರಿಸಿದ ಪರೀಕ್ಷೆಯನ್ನು ಒಪ್ಪಿಕೊಂಡು ಅದನ್ನು ರೂಢಿಗೆ ತರಲಾಗುವುದಿಲ್ಲವೋ ಅಲ್ಲಿಯವರೆಗೆ ಪರೀಕ್ಷಾ ಆಧಾರಿತ ವ್ಯವಸ್ಥೆಯನ್ನು ಸುಧಾರಿಸುವುದು ಕಷ್ಟ. ನಾವು ಕೇವಲ ಈ ರೀತಿಯ ಕಲಿಕಾನಿರ್ಧರಣೆಯನ್ನು ರಾಜ್ಯದಾದ್ಯಂತ ಕಾರ್ಯರೂಪಕ್ಕೆ ತರುವಂತೆ ಸರ್ಕಾರಕ್ಕೆ ಪ್ರಚೋದನೆ ನೀಡುವುದು ಸಾಧ್ಯವಾಯಿತೇ ಹೊರತು, ತಿಳುವಳಿಕೆ/ಕೌಶಲ್ಯ ಆಧಾರಿತ ಶಾಲಾ ಮಟ್ಟದ ಕಲಿಕಾನಿರ್ಧರಣೆಯನ್ನು ಉತ್ತೇಜಿಸುವುದು ಸಾಧ್ಯವಾಗಲಿಲ್ಲ.

- ನಮ್ಮ ಮೂರು ವರ್ಷದ ಪ್ರಯತ್ನವು ಪಾಠ ಅರ್ಥಮಾಡಿಕೊಳ್ಳುವುದನ್ನು ಆಧರಿಸಿದ ಕಲಿಕಾನಿರ್ಧರಣೆಯನ್ನು ಕುರಿತು ಒಂದು ಚಿತ್ರಣವನ್ನು ಕಟ್ಟಿ ಕೊಡಲು ಸಹಾಯಕವಾಯಿತೇ ಹೊರತು ಇದು ತರಗತಿಯ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರಲಿಲ್ಲ.

- ಸ್ಥಳೀಯ ಸಂದರ್ಭ ಆಧಾರಿತ ಕಲಿಕಾನಿರ್ಧರಣೆಯ ಸಾಧನವನ್ನು ರೂಪಿಸುವುದು ನಮಗೆ ಕಷ್ಟವಾಯಿತು. ಏಕೆಂದರೆ ಸಂಖ್ಯೆಗಳು ಮತ್ತು ಪ್ರದೇಶವ್ಯಾಪ್ತಿಯು ತುಂಬಾ ವಿಶಾಲವಾದುದಾಗಿತ್ತು.

- ನೆನಪಿನ ಆಧಾರದ ಪರೀಕ್ಷೆಗಳಿಂದ ವಿಷಯ ಮನನ ಆಧಾರಿತ ಪರೀಕ್ಷೆಗೆ ಸ್ಥಿತ್ಯಂತರ ಮಾಡಲು ಸಾಕಷ್ಟು ಪ್ರಮಾಣದ ಹಿನ್ನೆಲೆ ಕಾರ್ಯ, ದೃಷ್ಟಿಕೋನವನ್ನು ಬೆಳೆಸುವುದು ಮತ್ತು ತರಬೇತಿಯ ಅಗತ್ಯವಿದೆ.

- ಸಮೂಹ ಮಟ್ಟದ ಮೌಲ್ಯಾಂಕನದಲ್ಲಿ ಪಾರದರ್ಶಕತೆ ಮತ್ತು ನಿಖರತೆಯನ್ನು ಉಳಿಸಿಕೊಂಡುಬರುವುದು ಬಲು ದೊಡ್ಡ ಸವಾಲು.

- ಪಣವು ಹೆಚ್ಚಿದ್ದಾಗ ಅಸಂಗತತೆ ಉಂಟಾಗುವ ಅವಕಾಶ ಹೆಚ್ಚಿರುತ್ತದೆ.

- ಕಲಿಕಾನಿರ್ಧರಣೆಯಿಂದ ಅದರ ಅನುಷ್ಠಾನದವರೆಗಿನ ಬದಲಾವಣೆಯು ಬಲು ದೊಡ್ಡ ಕಾರ್ಯ. ಒಂದು ವೇಳೆ ಹಲವಾರು ಜನರು ಭಾಗವಹಿಸಿದ್ದು, ಹಲವಾರು ವ್ಯತ್ಯಯಗಳನ್ನು ಹೊಂದಿದ್ದರೆ ಅದು ಇನ್ನೂ ಕಷ್ಟಸಾಧ್ಯ.

**'ಉನ್ನತ ಮಟ್ಟದ ಚಿಂತನೆ'ಯ ನಿರ್ಧರಣೆ ಬಳ್ಳಾರಿ, ಕರ್ನಾಟಕ**

ಅಜೀಂ ಪ್ರೇಂಜಿ ಪ್ರತಿಷ್ಠಾನ ಮತ್ತು ಬಳ್ಳಾರಿ ಜಿಲ್ಲೆ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಜಂಟಿಯಾಗಿ ಉನ್ನತ ಮಟ್ಟದ ಚಿಂತನೆಯನ್ನು (HOTS) ಅರಿಯಲು ನಡೆಸಿದ ಸಣ್ಣ ಪ್ರಾಯೋಗಿಕ ಅಧ್ಯಯನ. ಉರು ಹೊಡೆದು ಕಲಿತದ್ದನ್ನು ನಿರ್ಧರಿಸುವುದಕ್ಕೆ ಬದಲಾಗಿ ಮಕ್ಕಳಲ್ಲಿ ವಿಮರ್ಶಾತ್ಮಕ ಮತ್ತು ಸೃಜನಶೀಲನ ಸಾಮರ್ಥ್ಯವನ್ನು ಪರೀಕ್ಷಿಸುವುದರೆಡೆಗೆ ಸಾಗುವುದು ಇಲ್ಲಿನ ಉದ್ದೇಶ. ಜೊತೆಗೆ ಶಿಕ್ಷಕರು ತಾವು ಬೋಧಿಸುತ್ತಿರುವ ವಿಷಯಗಳಲ್ಲಿ ಹೊಂದಿರುವ ಜ್ಞಾನ ಮತ್ತು ಒಲವನ್ನು ನಿರ್ಧರಿಸಲಾಯಿತು.

ವಿದ್ಯಾರ್ಥಿಗಳು ಉನ್ನತ ಮಟ್ಟದ ಚಿಂತನೆಯನ್ನು ಹೊಂದಬೇಕಾದಲ್ಲಿ, ತಮ್ಮ ಬಳಿ ಇರುವ ಮಾಹಿತಿ ಮತ್ತು ವಿಚಾರನ್ನು ಬಳಸಿ, ತಮ್ಮ ಗ್ರಹಿಕೆ ಮತ್ತು ಅವುಗಳ ಅಳವಡಿಕೆಯನ್ನು ಪರಿವರ್ತಿಸುವಂತೆ ಮಾಡಬೇಕು. ಇದು ಸಾಧ್ಯವಾಗುವುದು ವಿದ್ಯಾರ್ಥಿಗಳು, ಅಂಕಿ ಅಂಶಗಳನ್ನು, ಭಿನ್ನ ಆಲೋಚನೆಯನ್ನು ಸಂಯೋಜಿಸಿ, ಸಾಮಾನ್ಯೀಕರಿಸಿ, ವಿವರಣೆ ನೀಡಿ ಮತ್ತು ಅಂತಿಮ ನಿರ್ಧಾರಕ್ಕೆ ಬರಬೇಕು ಮತ್ತು ವಿದ್ಯಾರ್ಥಿಗಳು ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಅವಕಾಶ ನೀಡಿ ಹೊಸ ಅರ್ಥ ಮತ್ತು ಗ್ರಹಿಕೆಗಳನ್ನು ಹೊಂದುವುದಕ್ಕೆ ಅವಕಾಶ ಮಾಡಿಕೊಡಬೇಕು. ವಿದ್ಯಾರ್ಥಿಗಳು ಜ್ಞಾನ ಸಂರಚನೆಯಲ್ಲಿ ಸಕ್ರಿಯರಾಗಿರುವಾಗ, ಬೋಧನಾ ಪ್ರಕ್ರಿಯೆಯಲ್ಲಿ ಅನಿಶ್ಚಿತತೆಯ ಒಂದು ಅಂಶವನ್ನು ಸೇರಿಸಿದಂತಾಗಿ ಪಾಠ ಮಾಡಿದ ಪ್ರಕ್ರಿಯೆಯ ಫಲಿತಾಂಶ ಯಾವಾಗಲೂ ನಿರೀಕ್ಷಿತವಾಗಿಯೇ ಇರುವುದಿಲ್ಲ ಎಂಬುದನ್ನು ತಿಳಿಸಲಾಯಿತು. ಅಷ್ಟೇ ಅಲ್ಲ, ವಿದ್ಯಾರ್ಥಿಗಳ ಕಲಿಕೆಯ ಪರಿಣಾಮಗಳಿಗೂ ಮತ್ತು ಅವರ ವಿಷಯಜ್ಞಾನ ಮತ್ತು ದೃಷ್ಟಿಕೋನಕ್ಕೂ ಇರುವ ಸಂಬಂಧವನ್ನು ಅರಿಯುವುದೂ ಯೋಜನೆಯ ಭಾಗವಾಗಿತ್ತು.

ಪ್ರತಿಷ್ಠಾನದ ತಂಡವು ಪ್ರತಿಶಾಲೆಯಲ್ಲಿ ಎರಡು ದಿನಗಳ ಕಾಲ ಇದ್ದು, 3 ಮತ್ತು 4ನೇ ತರಗತಿಗಳಲ್ಲಿ ಭಾಷೆ ಮತ್ತು ಗಣಿತ ಕಲಿಕೆಯಲ್ಲಿ ಉನ್ನತ ಮಟ್ಟದ ಕೌಶಲ್ಯಗಳ ಮೌಲ್ಯಾಂಕನ ಮಾಡಿತು. ಜೊತೆಗೆ ಶಿಕ್ಷಕರನ್ನು ಅವರಿಗೆ ಸಂಬಂಧಿಸಿ ವಿಷಯಗಳು, ಅವುಗಳ ಬೋಧನಾ ವಿಧಾನ ಮತ್ತು ಸಂಬಂಧಿಸಿದ ಧೋರಣೆಗಳನ್ನು ಕುರಿತು ಮೌಲ್ಯಾಂಕನ ಮಾಡಲಾಯಿತು. ವಿದ್ಯಾರ್ಥಿಗಳು ತಾವಿರುವ ಸ್ಥಳ/ಸಂದರ್ಭ ಮತ್ತು ಅವರ ಅನುಭವಗಳನ್ನು ಹಂಚಿಕೊಳ್ಳಲು ಸಾಧ್ಯವಿರುವಲ್ಲಿ ಉನ್ನತ ಮಟ್ಟದ ಕೌಶಲ್ಯವನ್ನು ತೋರಿದರು ಎಂಬುದು ಈ ಅಧ್ಯಯನದ ವಿಶ್ಲೇಷಣೆಯಿಂದ ತಿಳಿದು ಬಂತು. ಉನ್ನತ ಮಟ್ಟದ ಕೌಶಲ್ಯಗಳ ಪ್ರದರ್ಶನದಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು, ಪಟ್ಟಣದ ವಿದ್ಯಾರ್ಥಿಗಳಿಗಿಂತ ಉತ್ತಮ ಪ್ರದರ್ಶನ ನೀಡಿದರು. ಕಲಿಕಾಖಾತರಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಶಾಲೆ, ಮತ್ತು ಪಾಲ್ಗೊಳ್ಳದ ಶಾಲೆಯ ವಿದ್ಯಾರ್ಥಿಗಳ ಕಲಿಕೆಯಲ್ಲಿ ಮಹತ್ವದ ವ್ಯತ್ಯಾಸವೇನೂ ಇರಲಿಲ್ಲ. ಎರಡೂ ವಿಭಾಗದ ಶಿಕ್ಷಕರ ಜ್ಞಾನದ ಮಟ್ಟವೂ ಸಮಾನವಾಗಿಯೇ ಇತ್ತು. ಶಿಕ್ಷಕರ ನಿಲುವು ಮತ್ತು ವಿದ್ಯಾರ್ಥಿಗಳ ಸಾಧನೆಗಳ ನಡುವೆ ಇರುವ ಪರಸ್ಪರ ಸಂಬಂಧವನ್ನು ಹೀಗೆ ನೋಡಬಹುದು:

- ವಿದ್ಯಾರ್ಥಿಗಳು ಹೆಚ್ಚು ಪ್ರಶ್ನೆಗಳನ್ನು ಕೇಳಬಾರದು ಎಂದು ಶಿಕ್ಷಕರು ಬಯಸುತ್ತಾರೆ. ಅನುಭವಿ ಶಿಕ್ಷಕರು ತಮ್ಮ ಕಲಿಕೆಯನ್ನು ಹಂಚಿಕೊಳ್ಳುವುದು ಅನಗತ್ಯ ಎಂದು, ಇದರಿಂದಾಗಿ ಶಿಸ್ತು ಪಾಲನೆಯ ಸಾಧ್ಯವಾಗುವುದಿಲ್ಲ ಎಂದು ಭಾವಿಸುತ್ತಾರೆ.

- ಶಿಕ್ಷಕರು ಸಾಂಪ್ರದಾಯಿಕ ಮಾದರಿಯ ಬೋಧನಾ ವಿಧಾನವನ್ನೇ ಅನುಕರಿಸುತ್ತಿದ್ದು, ಮಗುವಿನ ಬಗ್ಗೆ ಮತ್ತು ಅದರ ಕಲಿಕೆಯ ಬಗ್ಗೆ ಸಾಮಾನ್ಯವಾಗಿ ಒಂದೇ ಬಗೆಯ ರೂಢಿಯಲ್ಲಿರುವ ನಿಲುವನ್ನೇ ಹೊಂದಿರುತ್ತಾರೆ.

- ಎರಡು ರೀತಿಯ ಶಾಲೆಗಳಲ್ಲಿ (ಕಲಿಕಾ ಖಾತ್ರಿ ಯೋಜನೆಯಲ್ಲಿ ಪಾಲ್ಗೊಂಡ ಮತ್ತು ಪಾಲ್ಗೊಳ್ಳದ) ಬೋಧಿಸುವ ಶಿಕ್ಷಕರು ಸಮಾನತೆಯ ಬಗ್ಗೆ ಒಳ್ಳೆಯ ಅಭಿಪ್ರಾಯ ಅಥವಾ ನಂಬಿಕೆಯನ್ನು ಪ್ರದರ್ಶಿಸಲಿಲ್ಲ.

ವಿದ್ಯಾರ್ಥಿಗಳ ಕಲಿಕೆಯ ಪರಿಣಾಮಗಳು ಮತ್ತು ಶಿಕ್ಷಕರು ತಮ್ಮ ವೃತ್ತಿಯ ಬಗ್ಗೆ ಹೊಂದಿರುವ ನಿಲುವಿಗೂ ಬೋಧನೆ, ಕಲಿಕಾ ಪ್ರಕ್ರಿಯೆ, ಸಮುದಾಯ, ಮಕ್ಕಳು ಸಮಾನತೆಗಳ ನಡುವೆ ಸಂಬಂಧ ಇರುವುದನ್ನು ಕುರಿತ ಕುತೂಹಲಕಾರಿ ಒಳನೋಟಗಳನ್ನು ಈ ಅಧ್ಯಯನವು ತೆರೆದಿಟ್ಟಿತು. ವಾಸ್ತವದಲ್ಲಿ ಮಕ್ಕಳ ಕಲಿಕೆಯಲ್ಲಿ ಶಿಕ್ಷಕರ ಜ್ಞಾನದ ಮಹತ್ವ ಕೊಡುಗೆ ಇಲ್ಲ ಎಂಬುದು ತಿಳಿದು ಬಂತು. ಕಲಿಕಾ ಖಾತರಿ ಕಾರ್ಯಕ್ರಮದಲ್ಲಿ ವಿಜೇತ ಶಾಲೆಗಳಲ್ಲೂ ಕೂಡ ಶಿಕ್ಷಕರ ವೃತ್ತಿ ಧೋರಣೆಯ ಸಮಸ್ಯೆ ಇರುವುದನ್ನು ಅಧ್ಯಯನ ಗುರುತಿಸಿತು.

**ಬಾಲಸ್ನೇಹಿ ಶಾಲಾ ಪ್ರಯೋಗ, (CSFI) ಸುರಪುರ**

ಗುರುತಿಸಲ್ಪಟ್ಟ ಶಾಲೆಗಳಲ್ಲಿ ಹಿತಾಸಕ್ತಿದಾರರೆಲ್ಲರ ಸಹಭಾಗಿತ್ವದಲ್ಲಿ ಮಕ್ಕಳೆಲ್ಲರಿಗೂ ಗುಣಮಟ್ಟದ ಶಿಕ್ಷಣ ಕೊಡುವ ನಿಟ್ಟಿನ ಪ್ರಕ್ರಿಯೆ ಯನ್ನು ತೋರಿಸುವ ಈ ಮೂಲಕ ಸುಸ್ಥಿರ ರೀತಿಯಲ್ಲಿ ಸಾಮರ್ಥ್ಯವರ್ಧನೆ ಮಾಡಿ ಹೊಣೆಗಾರಿಕೆಯನ್ನು ಕಲಿಸಲಾಗುವ ಪ್ರಯೋಗವಿದು. ಈ ಶಿಕ್ಷಣ ಮಾದರಿಯನ್ನು 2005ರಿಂದ ಯಾದಗಿರಿ ಜಿಲ್ಲೆ ಸುರಪುರ ಬ್ಲಾಕ್‌ನ ಎಲ್ಲಾ 350 ಶಾಲೆಗಳಲ್ಲಿ ಜಾರಿ ಮಾಡಲಾಗುತ್ತಿದೆ. ಇದು, ಸಂಬಂಧಪಟ್ಟ ಎಲ್ಲ ಹಿತಾಸಕ್ತಿದಾರರನ್ನು (ಶಿಕ್ಷಕರು, ಸಮುದಾಯ ಸದಸ್ಯರು, ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ಕಾರ್ಯಕರ್ತರು) ಒಳಗೊಂಡ ಒಂದು ಪರಿಪೂರ್ಣ ಕಾರ್ಯಕ್ರಮವಾಗಿದ್ದು ವಿಶಾಲ ವ್ಯಾಪ್ತಿಯ ವಲಯಗಳನ್ನು (ಶಾಲಾ ವಾತಾವರಣ, ತರಗತಿಯ ವಾತಾವರಣ, ಬೋಧನೆ-ಕಲಿಕಾ ಪ್ರಕ್ರಿಯೆ, ಶಿಕ್ಷಕರಿಗೆ ವೃತ್ತಿ ತರಬೇತಿ ಮತ್ತು ಸಮುದಾಯದ ಪಾಲ್ಗೊಳ್ಳುವಿಕೆ) ಒಳಗೊಂಡಿದೆ. ಈ ಐದು ಕ್ಷೇತ್ರಗಳ

ಮೇಲ್ವಿಚಾರಣೆಗಾಗಿ 214 ಸೂಚಕಗಳನ್ನು ರೂಪಿಸಲಾಗಿದೆ. ಬಾಲಸ್ನೇಹಿ ಶಾಲಾ ಪ್ರಯೋಗವು ಭಿನ್ನ ಕಲಿಕಾನಿರ್ಧರಣೆ ವಿಧಾನವನ್ನು ಹೊಂದಿದೆ. ತಳಮಟ್ಟ, ಮಧ್ಯಮಟ್ಟ ಮತ್ತು ಕೊನೆಯ ಹಂತಗಳಲ್ಲಿ ವಿದ್ಯಾರ್ಥಿಗಳ ಕಲಿಕೆಯ ಸಾಧನೆಯನ್ನು ಪರೀಕ್ಷಿಸುತ್ತದೆ. ಶಾಲಾ ಸುಧಾರಣಾ ಯೋಜನೆಗಳ ತಳಮಟ್ಟ ಮತ್ತು ಮಧ್ಯಮಟ್ಟದ ತರಗತಿಯ ಪೂರಕ ಚಟುವಟಿಕೆಗಳ ಮೌಲ್ಯಾಂಕನ, ವಿದ್ಯಾರ್ಥಿಗಳ ಕಲಿಕಾ ಪರಿಣಾಮ ಮತ್ತು ಶಾಲಾ ಸುಧಾರಣಾ ಸೂಚಕಗಳ ನಡುವಿನ ಸಂಬಂಧವನ್ನು ನಿರ್ಧರಣೆ ಮಾಡುತ್ತವೆ.

ಶಾಲಾ ವಾತಾವರಣದ ಸುಧಾರಣಾ ಸೂಚಕಗಳ ಗುಣಮಟ್ಟ ಹೆಚ್ಚಿಸಿದರೆ ವಿದ್ಯಾರ್ಥಿಗಳ ಕಲಿಕಾಮಟ್ಟದ ಸುಧಾರಣೆಯ ಫಲಿತಾಂಶವೂ ಉತ್ತಮವಾಗಿರುತ್ತದೆ ಎಂದು ನಂಬಲಾಗಿದೆ. ತಳಮಟ್ಟದ ಶಾಲಾ ಸುಧಾರಣಾ ಯೋಜನೆ ಸೂಚಕಗಳು ಮತ್ತು 1 ರಿಂದ 4ನೇ ತರಗತಿ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಮಟ್ಟದ ಸುಧಾರಣೆಯನ್ನು 2005ರಲ್ಲಿ ನಡೆಸಲಾಯಿತು. ಮೊದಲ ಮೂರು ವರ್ಷಗಳಲ್ಲಿ (2005–2008) ಪ್ರತಿ ಶಾಲೆಯೂ ಶಾಲಾ ಸುಧಾರಣಾ ಸೂಚಕಗಳನ್ನು ಪಡೆದುಕೊಳ್ಳುವಂತೆ ಮಾಡುವುದೇ ಯೋಜನೆಯ ಗುರಿ ಮತ್ತು ಪ್ರಯತ್ನವಾಗಿತ್ತು. ಸುಧಾರಣೆ ಮತ್ತು ಸೂಚಕಗಳು ಹಾಗೂ ವಿದ್ಯಾರ್ಥಿಗಳ ಕಲಿಕಾ ಪರಿಣಾಮಗಳ ಸಂಬಂಧಗಳನ್ನು ತಿಳಿಯಲು 2008ರಲ್ಲಿ ಮಧ್ಯಮ ಮಟ್ಟದ ಕಲಿಕಾನಿರ್ಧರಣೆ ಮಾಡಲಾಯಿತು. ಈ ವಿಶ್ಲೇಷಣೆ ಅನಿರೀಕ್ಷಿತವಾದ ಫಲಿತಾಂಶವನ್ನು ನೀಡಿತು. ಶಾಲಾಭಿವೃದ್ಧಿಯಲ್ಲಿ ಶೇ. 23ರಷ್ಟು ಸುಧಾರಣೆ ಕಂಡಿತಾದರೂ ವಿದ್ಯಾರ್ಥಿಗಳ ಕಲಿಕಾಮಟ್ಟದಲ್ಲಿ ಸುಧಾರಣೆ ಕಾಣಲಿಲ್ಲ. ಶಾಲಾ ಅಭಿವೃದ್ಧಿ ಸೂಚಕಗಳ ಸಾಧನೆಯಲ್ಲಿ ಶೇ.90 ಪ್ರದರ್ಶನ ನೀಡಿದ ಶಾಲೆಗಳಲ್ಲೂ ಇದೇ ಚಿತ್ರಣವಿತ್ತು.


ಮಧ್ಯಮ ಮಟ್ಟದ ಕಲಿಕಾನಿರ್ಧರಣೆಯನ್ನು ಪುನರ್ ವಿಮರ್ಶೆಗೆ ಒಳಪಡಿಸಿದಾಗ ತಂಡವು ಸೂಚಕಗಳನ್ನು ಪರಿಷ್ಕರಿಸಬೇಕೆಂದು ಬಯಸಿತು. ನಾವು ಶಾಲಾಭಿವೃದ್ಧಿ ಮತ್ತು ಸಮಗ್ರ ಪೂರಕ ಚಟುವಟಿಕೆಗಳನ್ನು ಒಳಗೊಂಡ ಸೂಚಕಗಳನ್ನು ಒಳಗೊಳ್ಳಬೇಕಾಗಿತ್ತು. ಇವು ಶಿಕ್ಷಕ ಸಾಮರ್ಥ್ಯದ ಹೆಚ್ಚಳ ಮತ್ತು ಸಮುದಾಯ ಸಂಪರ್ಕಕ್ಕೆ ಕೊಡುಗೆ ನೀಡುವಂತಿರಬೇಕಿತ್ತು ಎಂಬುದು ತಿಳಿದು ಬಂತು. ಇದರಿಂದಾಗಿ ಶಿಕ್ಷಕ ವೃತ್ತಿಪರತೆ ಹೆಚ್ಚಿಸುವ ಕಲಿಕಾ ಕೇಂದ್ರಗಳು, ಬದಲಾವಣೆ ಪ್ರತಿನಿಧಿಗಳ ತರಬೇತಿ ಮತ್ತು ನಿರಂತರ ಶಿಕ್ಷಕರ ಸಂವಾದ ಸಭೆಗಳು, ವಾರ್ತಾ ಪತ್ರಗಳ ಪ್ರಕಟಣೆಯಂಥ ಹೊಸ ಚಟುವಟಿಕೆಗಳನ್ನು ಕಂಡುಕೊಳ್ಳುವಂತಾಯಿತು. ಮಕ್ಕಳಿಗೆ ಕಲಿಕಾ ಮೇಳಗಳು, ಸಮುದಾಯ ಜಾಥಾಗಳು, ಗುಂಪು ಚರ್ಚೆಗಳನ್ನು ಸಮುದಾಯದ ಸಹಭಾಗಿತ್ವದ ಭಾಗವಾಗಿ ಪರಿಚಯಿಸಲಾಯಿತು. ಈ ಕಾರ್ಯಕ್ರಮದ ಪರಿಣಾಮವನ್ನು ಅರಿಯುವುದಕ್ಕಾಗಿ ಪ್ರತಿಷ್ಠಾನವೂ 2011ರಲ್ಲಿ ಆಯ್ದ ಶಾಲೆಗಳಲ್ಲಿ 3 ಮತ್ತು 4ನೇ ತರಗತಿಗಳ ಕಲಿಕಾ ಪರಿಣಾಮವನ್ನು ಕುರಿತು ಮಧ್ಯಮ ಮಟ್ಟದ ಕಲಿಕಾನಿರ್ಧರಣೆ ಮಾಡಿತು.

ತಳಮಟ್ಟ ಮತ್ತು ಅಂತಿಮಮಟ್ಟದ ಕಲಿಕಾನಿರ್ಧರಣೆಯನ್ನು ಈ ರೀತಿಯಲ್ಲಿ ನಡೆಸಲಾಯಿತು.

- ಅನಿಯಮಿತವಾಗಿ ಆಯ್ದ 50 ಶಾಲೆಗಳಿಂದ ಮಾದರಿಗಳನ್ನು ಪಡೆಯಲಾಯಿತು.
- ಆಯ್ದ ಶಾಲೆಗಳ 3 ಮತ್ತು 4ನೇ ತರಗತಿ ವಿದ್ಯಾರ್ಥಿಗಳಿಗೆ ಗಣಿತ ಮತ್ತು ಪರಿಸರ ವಿಜ್ಞಾನ ವಿಷಯದಲ್ಲಿ ಲಿಖಿತ ಕಲಿಕಾ ಸಾಧನೆ ಪರೀಕ್ಷೆಯನ್ನು ನೀಡಿ ನಿರ್ಧರಣೆ ಮಾಡಲಾಯಿತು. ಈ ಎರಡೂ ಪರೀಕ್ಷೆಗಳನ್ನು ಕನ್ನಡದಲ್ಲಿ ನಡೆಸಲಾಯಿತು.
- ಎರಡು ಅಧ್ಯಯನಗಳಲ್ಲಿ ಒಂದೇ ರೀತಿಯ ಪರೀಕ್ಷಾ ವಿಧಾನವನ್ನು ಅನುಸರಿಸಲಾಯಿತು.

ಅಂತಿಮಮಟ್ಟ ಕಲಿಕಾನಿರ್ಧರಣೆಯ ವಿಶ್ಲೇಷಣೆಯಲ್ಲಿ ನಿಖರವಾದ ಮತ್ತು ಮಹತ್ವದ ಸುಧಾರಣೆ ಗೋಚರವಾಯಿತು. ಕಲಿಕಾ ಸಾಧನೆಯ ಮಟ್ಟದಲ್ಲಿ ತಳಮಟ್ಟ ಮತ್ತು ಮಧ್ಯಮ ಮಟ್ಟದ ಕಲಿಕಾನಿರ್ಧರಣೆ ಯಲ್ಲಿ (2009ರಿಂದ 2011) ಕ್ಕಿಂತ 16.2ರಷ್ಟು ಅಂಕಗಳು (ಶೇ. 47ಕ್ಕಿಂತ ಸುಧಾರಣೆ) ಲಭಿಸಿದ್ದವು. ಗಣಿತ ಮತ್ತು ಪರಿಸರ ವಿಜ್ಞಾನ ವಿಷಯಗಳ ಅಂಕಿ ಅಂಶಗಳನ್ನು ಪ್ರತ್ಯೇಕವಾಗಿ ವಿಶ್ಲೇಷಿಸಿದಾಗಲೂ ಇದೇ ರೀತಿಯ ಗುಣಮಟ್ಟದ ಹೆಚ್ಚಳ ಕಂಡು ಬಂದಿತು. ಕುತೂಹಲದ ಸಂಗತಿ ಎಂದರೆ ಸುಧಾರಣೆಯ ಪ್ರಮಾಣವು 4ನೇ ತರಗತಿಗಿಂತ (ಶೇ.7.3 ಅಂಕಗಳು) ಹೆಚ್ಚಿನ ಪ್ರಮಾಣದಲ್ಲಿ 3ನೇ ತರಗತಿಯಲ್ಲಿ (ಶೇ.23.5 ಅಂಕಗಳು) ಕಾಣಿಸಿತು. ಲಿಂಗ ಮತ್ತು ಸಾಮಾಜಿಕ–ಆರ್ಥಿಕತೆ ಆಧಾರದ ಮೇಲೆ ಅಂಕಿ ಅಂಶಗಳನ್ನು ವಿಶ್ಲೇಷಿಸಿದಾಗ, ತಳಮಟ್ಟ ಮತ್ತು ಮಧ್ಯಮಮಟ್ಟದ ಕಲಿಕಾನಿರ್ಧರಣೆ ಪ್ರಕಾರ ಎಲ್ಲ ವಿಭಾಗಗಳಲ್ಲಿ ಸುಧಾರಣೆಯಾಗಿರುವುದನ್ನು ಗುರುತಿಸಿದೆವು.

ಬಾಲಸ್ನೇಹಿ ಶಾಲಾ ಪ್ರಯೋಗದ ನಿರಂತರ ಹಾಗೂ ಸಮಗ್ರ ಮೌಲ್ಯಾಂಕನ ಮಾರ್ಗವು ವ್ಯಾಸಂಗಕ್ರಮ ಸುಧಾರಣೆಗೆ ಅಗತ್ಯವಾದ ಅಂಕಿ ಅಂಶಗಳನ್ನು ನೀಡಿತು. ಎಲ್ಲಕ್ಕೂ ಮಿಗಿಲಾಗಿ ಇದು ತಂಡಕ್ಕೆ ಯಾವ ನಿಟ್ಟಿನಲ್ಲಿ ಸುಧಾರಣೆಗಳನ್ನು ಮಾಡಬೇಕು ಎಂಬುದಕ್ಕೆ, ಮತ್ತು ಅರ್ಥಪೂರ್ಣ ಮಾರ್ಗಗಳನ್ನು ಅನುಸರಿಸಿ ಪರಿಣಾಮಕಾರಿಯಾಗಿ ಕಾರ್ಯಕ್ರಮ ನಡೆಸುವುದಕ್ಕೆ ತಂಡಕ್ಕೆ ನೆರವಾಯಿತು. ಬಹುಮುಖ್ಯವಾಗಿ ಕಾರ್ಯಕ್ರಮದ ಅಂಕಿ ಅಂಕಗಳ ಬಗ್ಗೆ, ಮತ್ತು ಮಹತ್ವದ ಕಲಿಕೆಗಳ ಬಗ್ಗೆ ಹೊರ ಜಗತ್ತಿನೊಂದಿಗೆ ಆತ್ಮವಿಶ್ವಾಸ ದಿಂದ ಮಾತನಾಡುವಂತೆ ಮಾಡಿತು.



***ರುದ್ರೇಶ್,*** *ಅಜೀಂ ಪ್ರೇಂಜಿ ಪ್ರತಿಷ್ಠಾನದ ಯಾದಗಿರಿ ಜಿಲ್ಲಾ ಸಂಸ್ಥೆಯ ನೇತಾರರಾಗಿದ್ದಾರೆ. ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಸಮಾಜ ಸೇವೆ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಅಜೀಂ ಪ್ರೇಂಜಿ ಪ್ರತಿಷ್ಠಾನದಲ್ಲಿ ಕಳೆದ 9 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಬಾಲಸ್ನೇಹಿ ಶಾಲಾ ಪ್ರಯೋಗದ ಕಲ್ಪನೆ ಮತ್ತು ಕಾರ್ಯರೂಪಕ್ಕೆ ತರುವುದರಲ್ಲಿ ಇವರದ್ದೇ ಹೆಚ್ಚಿನ ಹೊಣೆಗಾರಿಕೆ. ಜೊತೆಗೆ ಸರಕಾರಿ ಕಾರ್ಯಕ್ರಮಗಳು ಮತ್ತು ಸಮುದಾಯದೊಡನೆ ಸಂಬಂಧವನ್ನು ನಿರ್ವಹಿಸುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದ್ದಾರೆ. ಇವರನ್ನು rudresh@azimpremjifoundation.org ಮೂಲಕ ಸಂಪರ್ಕಿಸಬಹುದು.*